# ನಾನಿದ್ದಂತೇ ನನ್ನನ್ನು ನಾನು ಪ್ರೀತಿಸಬೇಕು

**ಗೀತಾ ಭಾರತಿ ಭಟ್**
ಝೀ ಕನ್ನಡದ 'ಬ್ರಹ್ಮಗಂಟು'ನ ಗುಂಡಮ್ಮ



◆ **ಲಾಕ್‌ಡೌನ್ ಅವಧಿಯಲ್ಲಿ ಏನೇನು ಮಾಡಿದಿರಿ?**

ಲಾಕ್‌ಡೌನ್ ಅಂತ ಅನ್ನಿಸಲೇ ಇಲ್ಲ ಸಮಯ ಕಳೆದದ್ದು ಗೊತ್ತಾಗಲೂ ಇಲ್ಲ. ಅಪ್ಪ– ಅಮ್ಮ ಮನೆಯಲ್ಲೇ ಇದ್ದರು. ನನಗೂ ತುಂಬ ದಿನಗಳಿಂದ ಮನೆಯಲ್ಲಿ ಸಮಯ ಕಳೆಯಲು ಆಗಿರಲಿಲ್ಲ. ಅದಕ್ಕೆ ಅವಕಾಶ ಸಿಕ್ಕಂತೆ ಆಗಿತ್ತು. ನನಗೆ ಡ್ರಾಯಿಂಗ್, ಪೇಂಟಿಂಗ್‌ನಲ್ಲಿ ಮೊದಲಿನಿಂದ ಆಸಕ್ತಿ ಇತ್ತು. ಅದೆಲ್ಲವನ್ನು ಇತ್ತೀಚೆಗೆ ಮರೆತೇ ಬಿಟ್ಟಿದ್ದೆ. ಅದನ್ನು ಈ ಅವಧಿಯಲ್ಲಿ ಮತ್ತೆ ಅಭ್ಯಾಸ ಮಾಡಿದೆ. ನಮ್ಮ ಬಿಲ್ಡಿಂಗ್‌ನಲ್ಲಿ ಮಕ್ಕಳಿಗೂ ನನ್ನ ಹವ್ಯಾಸವನ್ನು ಹೇಳಿಕೊಡಲು ಅನುಕೂಲ ಆಯಿತು. ಹತ್ತಾರು ಮಕ್ಕಳ ಜೊತೆ ನನಗೂ ಅಪ್ಪ ಸೂರ್ಯ ನಮಸ್ಕಾರ ಹೇಳಿಕೊಡ್ತಾ ಇದ್ದರು. ಅಡುಗೆ ಮಾಡುವುದು, ಸಿನಿಮಾ ನೋಡುವುದು ಮಾಡಿದೆ. ಮನೆಯ ಹತ್ತಿರದಲ್ಲಿರುವ ಶಾಲೆಯೊಂದರಲ್ಲಿ ಸೇವಾ ಸಂಸ್ಥೆಯೊಂದು ಹಸಿದವರಿಗೆ ಊಟ ಸರಬರಾಜು ಮಾಡುತ್ತಿತ್ತು. ಅದಕ್ಕೆ ನಿತ್ಯ ಸ್ವಲ್ಪ ಹೊತ್ತು ಹೋಗಿ ಆಹಾರದ ಪೊಟ್ಟಣವನ್ನು ಕಟ್ಟುತ್ತಿದ್ದೆ. ನಮ್ಮ ಬಡಾವಣೆಯ ಒಂದೆರಡು ಬೀದಿಗಳಲ್ಲಿ ನಾಯಿಗಳಿಗೆ ಬಿಸ್ಕೆಟ್ ಹಾಕಿ ಬರುತ್ತಿದ್ದೆ.

◆ **ಬ್ರಹ್ಮಗಂಟು ಲಿಂಕ್ ತಪ್ಪಿತ್ತು ಅದನ್ನೀಗ ಹೇಗೆ ಮುಂದುವರಿಸುತ್ತಿದ್ದೀರಿ?**

ಹೊರಾಂಗಣ ಚಿತ್ರೀಕರಣವನ್ನು ಈಗ ಮಾಡುವಂತಿಲ್ಲ. ಜೊತೆಗೆ ಹಿರಿಯರ ಆರೋಗ್ಯದ ದೃಷ್ಟಿಯಿಂದ ಅವರನ್ನು ಚಿತ್ರೀಕರಣದಲ್ಲಿ ತೊಡಗಿಸಿಕೊಳ್ಳುವಂತಿಲ್ಲ. ಆದಷ್ಟು ಕಡಿಮೆ ಜನರು ಮಾತ್ರ ಭಾಗವಹಿಸಬೇಕು ಎಂಬ ನಿಯಮಾವಳಿಯ ಚೌಕಟ್ಟಿನಲ್ಲಿ ಮಾಡಲಾಗುತ್ತಿದೆ. ಇದೆಲ್ಲವನ್ನೂ ಒಳಗೊಂಡಂತೆ ಕಥೆಯನ್ನು ಭಿನ್ನವಾಗಿ ನಿರೂಪಿಸಲಾಗುತ್ತಿದೆ. ಎರಡು ತಿಂಗಳ ಗ್ಯಾಪ್ ಆಗಿದೆ. ಹಳೆಯ ಕಥೆಯ ಕೊಂಡಿಯನ್ನೇ ಇಟ್ಟುಕೊಂಡು ಮುಂದುವರಿಸಬೇಕು. ಅದನ್ನು ಹೇಗೆ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ತಿಳಿಯುವ ಕುತೂಹಲ ನನಗೂ ಇದೆ. ಸೀಮಿತ ಸಂಪನ್ಮೂಲದೊಳಗೆ ಕುಟುಂಬದ ಕಥೆಯನ್ನು ಹೆಣೆಯಲಾಗುತ್ತಿದೆ ಎದೆನಿಸಿದೆ. ಈ ಮೊದಲು ಒಂದು ಟ್ರ್ಯಾಕ್‌ನಲ್ಲಿ ಕಥೆ ಹೋಗ್ತಾ ಇತ್ತು. ಕಬಡ್ಡಿ ಪ್ರೀಮಿಯರ್ ಲೀಗ್ ನಡೀತಾ ಇತ್ತು. ಈಗ ಕಬಡ್ಡಿ ವೀಕ್ಷಣೆಗೆ ಜನರನ್ನು ಸೇರಿಸುವಂತಿಲ್ಲ. ಬಯಲಿನಲ್ಲಿ ಚಿತ್ರೀಕರಣ ಮಾಡುವಂತಿಲ್ಲ. ಇಂತಹ ಮಿತಿಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದಲೂ ಪಾಲಿಸಬೇಕು. ಜನರನ್ನು ಸೇರಿಸದಂತೆ ಕಥೆಯನ್ನು ನಿರೂಪಿಸಬೇಕು. ಒಟ್ಟಾರೆ ಕಷ್ಟ ಇದೆ. ಏನೇ ಇದ್ದರೂ ಕ್ರಿಯಾಶೀಲವಾಗಿ ರೂಪಿಸಲಾಗುತ್ತದೆ.

◆ **ಗುಂಡಮ್ಮನ ಪಾತ್ರದ ನಂತರ ನಿಮ್ಮಲ್ಲಿ ಉಂಟಾದ ಬದಲಾವಣೆಗಳೇನು?**

ಈ ಪಾತ್ರವನ್ನು ಮಾಡುವ ಮೊದಲು ನನ್ನಲ್ಲಿ ಸಣ್ಣ ಕೀಳರಿಮೆ ಇತ್ತು. ಈ ಪಾತ್ರ ಮಾಡ್ತಾ ಮಾಡ್ತಾ ನನ್ನಲ್ಲಿ ಆತ್ಮವಿಶ್ವಾಸ ಜಾಸ್ತಿ ಆಗ್ತಾ ಹೋಯಿತು. ಅದು ನನ್ನ ಮನಸ್ಸಿನಲ್ಲಿ ಅಡಗಿದ್ದ ಕೀಳರಿಮೆಯನ್ನು ಕಿತ್ತು ಹಾಕಿತು. ಗುಂಡಮ್ಮ ಮಾತ್ರ ಯಾರು ಏನೇ ಅಂದರೂ ಕ್ಯಾರೆ ಅನ್ನುವುದಿಲ್ಲ. ಅವಳಿಗೆ ಅವಳ ಬಗ್ಗೆ ಚೆನ್ನಾಗಿ ಗೊತ್ತು. ಅವಳು ಹೇಗಿದ್ದಾಳೆಯೋ ಹಾಗೆಯೇ ಅವಳನ್ನು ಒಪ್ಪಿಕೊಳ್ಳುತ್ತಾ ಹೋಗಿದ್ದಾಳೆ. ಇದು ನನ್ನಲ್ಲೂ ಬದಲಾವಣೆ ಮಾಡುತ್ತಾ ಹೋಯಿತು. ನಾನು ಇರುವುದೇ ಹೀಗೆ, ನನ್ನನ್ನು ನಾನು ಪ್ರೀತಿಸಬೇಕು ಎನ್ನುವುದನ್ನು ಅರಿತುಕೊಂಡೆ. ಇದರ ಜೊತೆಗೆ ನನಗೊಂದು ಭಯ ಇತ್ತು. ಜನ ನನ್ನ ನಟನೆಯನ್ನು ಹೇಗೆ ಸ್ವೀಕರಿಸುತ್ತಾರೋ ಎನ್ನುವ ಶಂಕೆಯೂ ಇತ್ತು. ಏಕೆಂದರೆ ಇಷ್ಟು ದಿನ ಅವರು ತೆಳ್ಳಗೆ– ಬೆಳ್ಳಗೆ ಇದ್ದ ಹುಡುಗಿಯರನ್ನೇ ತೆರೆಯಲ್ಲಿ ನೋಡುತ್ತಿದ್ದರು. ಈಗ ನನ್ನ ಪಾತ್ರ ಅವರಿಗೆ ಹಿಡಿಸುವುದೋ ಇಲ್ಲವೋ ಎನ್ನುವ ಪ್ರಶ್ನೆ ನನಗೆ ಇತ್ತು. ಜನ ಪ್ರೀತಿಯಿಂದ ತಮ್ಮ ಮನೆ ಮಗಳಂತೆಯೇ ನೋಡುತ್ತಾರೆ. ಹೊರಗಡೆ ಎಲ್ಲಾದರೂ ಜನ ಸಿಕ್ಕಾಗ 'ನಿಮಗೆ ಏಕೆ ಅಷ್ಟು ಕಾಟ ಕೊಡುತ್ತಾರೆ? ಅವರ ನಂಬರ್ ಕೊಡಿ ಅಷ್ಟು ಕಾಡಿಸಬೇಡಿ ಅಂತ ಹೇಳ್ತೀವಿ' ಅಂತಾರೆ. ನನ್ನ ಹಾಗೆಯೇ ದಪ್ಪ ಇರುವವರೂ ಕೂಡ ಮಾತನಾಡುತ್ತಾರೆ– ಫೋನ್ ಮಾಡುತ್ತಾರೆ ಅವರಲ್ಲೂ ಆತ್ಮವಿಶ್ವಾಸ ಮೂಡಿದೆ ಎನ್ನುತ್ತಾರೆ. ಗುಂಡಮ್ಮನನ್ನು ನೋಡಿ ಹೊರಬರಲು ಯಾವ ಹಿಂಜರಿಕೆಯೂ ಆಗುವುದಿಲ್ಲ ಎನ್ನುತ್ತಾರೆ. ಪಾತ್ರ ಸಾರ್ಥಕತೆಯನ್ನು ಸಾಧಿಸಿದೆ ಎಂದು ನನಗೆ ಆಗೆಲ್ಲ ಅನ್ನಿಸುತ್ತದೆ.

◆ **ಮುಂದೆ ಏನು ಮಾಡಬೇಕು ಎಂದುಕೊಂಡಿದ್ದೀರಿ?**

ಮನೋರಂಜನಾ ಕ್ಷೇತ್ರದಲ್ಲಿ ಇರಬೇಕು ಎನ್ನುವುದು ಸದ್ಯದ ಸಂಕಲ್ಪ. ನಟನೆಯನ್ನು ಮುಂದುವರಿಸಬೇಕು ಎಂದೆನಿಸುತ್ತದೆ. ಗಾಯನವನ್ನೂ ಮುಂದುವರಿಸಬೇಕು ಎನ್ನುವ ಆಸೆಯೂ ಇದೆ. ಫೋಟೋಗ್ರಫಿ ಕೂಡ ಆಸಕ್ತಿಯ ಕ್ಷೇತ್ರ. ಈ ಮೂರು ಆಯಾಮದ ತ್ರಿಕೋನ ಮಾರ್ಗದಲ್ಲಿ ನಡೆಯುತ್ತೇನೆ. ಈಗ ಸದ್ಯ ಆರೋಗ್ಯವನ್ನು ಸುಧಾರಿಸಿಕೊಳ್ಳಬೇಕಿದೆ. ಅದರ ಕಡೆ ಹೆಚ್ಚು ಒತ್ತುಕೊಡುತ್ತೇನೆ. ಈ ಪಾತ್ರಕ್ಕೋಸ್ಕರ ಹೀಗೆಯೇ ಇರಬೇಕಿದೆ.

■ **ರಾಘವೇಂದ್ರ ಕೆ.**